**ಹಿಂಬರಹ ಸಂಖ್ಯೆ: ಡಿಟಿಇ 06 ಡಿಇಕ್ಯೂ(1) 2013, ದಿನಾಂಕ: 02/11/2016** / 2158

ಸರ್ಕಾರದ ಆದೇಶ ಸಂಖ್ಯೆ: ಇಡಿ/126/ಡಿಟಿಇ/2014, ದಿನಾಂಕ: 24/10/2016ನ್ನು ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಈ ಕೆಳಕಂಡವರಿಗೆ ಕಳುಹಿಸಲಾಗಿದೆ.

ಆಡಳಿತಾಧಿಕಾರಿ.
3/11/16

ಇವರಿಗೆ,

1) ಶ್ರೀ.ಎಸ್.ಬಿ.ಮುಜಗೊಂಡ, ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ – ಪ್ರಿನ್ಸಿಪಾಲರ ಮುಖಾಂತರ.
2) ಶ್ರೀ.ಅರುಣಕುಮಾರ್.ಆರ್.ನವಣೆ, ಮೆಕ್ಯಾನಿಕ್, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ – ಪ್ರಿನ್ಸಿಪಾಲರ ಮುಖಾಂತರ

**ಪ್ರತಿ – ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ**

1. ಮಹಾಲೇಖಪಾಲರು (ಎ&ಇ ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯಕಾರ್ಯದರ್ಶಿಯವರು, ಶಿಕ್ಷಣ ಇಲಾಖೆ(ತಾಂತ್ರಿಕ ಶಿಕ್ಷಣ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಜಂಟಿನಿರ್ದೇಶಕರು(ಆಡಳಿತ), ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಶ್ರೀ.ಎಸ್.ವೈ.ಕುಂಬಾರ್, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, #394, 18ನೇ ಮೇನ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560 095 (ಮೊಬೈಲ್ ಸಂ: 9900245450)
5. ಶ್ರೀ.ಜಿ.ಶ್ರೀಕಾಂತ್, ಉಪ ನಿರ್ದೇಶಕರು(ತನಿಖೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
6. ಆಡಳಿತಾಧಿಕಾರಿಯವರು, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು.
7. ಪ್ರಿನ್ಸಿಪಾಲರು, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ.
8. ನಿರ್ದೇಶಕರ ಆಪ್ತಶಾಖೆಗೆ ಮಾಹಿತಿಗಾಗಿ.
9. ಇ-ಆಡಳಿತ ವಿಭಾಗ, ಸದರಿ ಆದೇಶವನ್ನು ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸುವ ಸೂಕ್ತ ಕ್ರಮಕ್ಕಾಗಿ.
10. ಇಎಸ್‌ಟಿ1(ಎ) ಇಎಸ್‌ಟಿ(6) ವಿಭಾಗಕ್ಕೆ.

OEE2/5 Admn/ R Adms

C 26/10

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್‌ಕುಮಾರ್. ಆರ್.ನವಣೆ., ಮೆಕ್ಯಾನಿಕ್, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ-ಇವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಗಳನ್ನು ನೇಮಿಸುವ ಬಗ್ಗೆ.

**ಓದಲಾಗಿದೆ:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರಸಂಖ್ಯೆ: ಡಿಟಿಇ 12 ಡಿಇಕ್ಯೂ (1) 2012/82, ದಿನಾಂಕ: 26.03.2014.
2. ಸರ್ಕಾರದ ಪತ್ರಸಂಖ್ಯೆ: ಇಡಿ 126 ಡಿಟಿಇ 2014, ದಿನಾಂಕ: 01.08.2014.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರಸಂಖ್ಯೆ: ಡಿಟಿಇ 12 ಡಿಇಕ್ಯೂ (1) 2012/1614, ದಿನಾಂಕ: 14.08.2015.
4. ಸರ್ಕಾರದ ನೋಟೀಸ್ ಸಂಖ್ಯೆ: ಇಡಿ 197 ಡಿಟಿಇ 2013 (ಭಾಗ), ದಿನಾಂಕ: 16.12.2015 ಮತ್ತು ದಿನಾಂಕ: 08.02.2016.
5. ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್ ಕುಮಾರ್.ಆರ್.ನವಣೆ., ಮೆಕ್ಯಾನಿಕ್, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ-ಇವರುಗಳ ಲಿಖಿತ ಹೇಳಿಕೆ, ದಿನಾಂಕ: 09.01.2016 ಮತ್ತು ದಿನಾಂಕ: 02.03.2016.
6. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಇವರ ಪತ್ರಸಂಖ್ಯೆ: ಡಿಟಿಇ 12 ಡಿಇಕ್ಯೂ (1) 2012/745, ದಿನಾಂಕ: 24.06.2016.

**ಪ್ರಸ್ತಾವನೆ:**

ಮೇಲೆ ಕ್ರಮಸಂಖ್ಯೆ (1)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-ರವರು ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ-ಇಲ್ಲಿ 2012-13ರ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್‌ಕುಮಾರ್. ಆರ್.ನವಣೆ., ಮೆಕ್ಯಾನಿಕ್, ಇವರುಗಳ ಬೇಜವಾಬ್ದಾರಿ ಹಾಗೂ ಕರ್ತವ್ಯ ನಿರ್ಲಕ್ಷ್ಯತೆಯಿಂದ Programmable LC Kit ಹಾಗೂ LCD Projector ಗಳು ಕಾಣೆಯಾಗಲು ಕಾರಣವಾಗಿದ್ದು, ಈ ಬಗ್ಗೆ ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ನಡೆಸಿದ ಪೂರ್ವಭಾವಿ ತನಿಖೆಯಲ್ಲಿ ಅವರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ಸಾಬೀತಾದಂತೆ ಕಂಡುಬಂದ ಕಾರಣ ಸದರಿಯವರುಗಳ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳುವಂತೆ ಸರ್ಕಾರವನ್ನು ಕೋರಿದ್ದು, ತಾಂತ್ರಿಕ ಶಿಕ್ಷಣ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ, ಮೇಲೆ ಕ್ರಮಸಂಖ್ಯೆ (2)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಸದರಿಯವರುಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲು ಅನುವಾಗುವಂತೆ ಸಿ.ಸಿ.ಎ. ನಿಯಮಾನುಸಾರ ಅನುಬಂಧ (i)ರಿಂದ (iv)ರವರೆಗೆ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ಸಲ್ಲಿಸುವಂತೆ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು-ರವರನ್ನು ಕೋರಲಾಗಿರುತ್ತದೆ.

JD PS-TO 28/10/2016

ಮೇಲೆ ಕ್ರಮಸಂಖ್ಯೆ (3)ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಕರ್ನಾಟಕ ಸರ್ಕಾರಿ ಸೇವಾ ನಿಯಮ (ಸಿ.ಸಿ.ಎ), 1957ರ ನಿಯಮಗಳು, ನಿಯಮ 11ರ ಉಪಬಂಧಗಳಗನುಸಾರವಾಗಿ ಅನುಬಂಧ (i)ರಿಂದ (iv)ರಲ್ಲಿ ನಿರ್ದಿಷ್ಟವಾದ ಮತ್ತು ಸ್ಪಷ್ಟವಾದ ಬೇಜವಾಬ್ದಾರಿ ಹಾಗೂ ಕರ್ತವ್ಯ ನಿರ್ಲಕ್ಷ್ಯತೆಯ ದೋಷಾರೋಪಣಾ ಮತ್ತು ದೋಷಾರೋಪಣೆಯ ವಿವರಗಳನ್ನು ಹಾಗೂ ಅದಕ್ಕೆ ಸಮರ್ಥಿಸುವ ದಸ್ತಾವೇಜುಗಳ ಮತ್ತು ಸಾಕ್ಷಿಗಳ ಪಟ್ಟಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಕಳುಹಿಸಿರುತ್ತಾರೆ.

28/10

ಮೇಲೆ ಕ್ರಮಸಂಖ್ಯೆ (4)ರಲ್ಲಿ ಓದಲಾದ ದಿನಾಂಕ: 16.12.2015 ಮತ್ತು ದಿನಾಂಕ: 08.02.2016ರ ಸರ್ಕಾರದ ಪತ್ರಗಳಲ್ಲಿ ಕ್ರಮವಾಗಿ ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್‌ಕುಮಾರ್. ಆರ್.ನವಣೆ., ಮೆಕ್ಯಾನಿಕ್, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ-ಇವರುಗಳಿಗೆ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ (ಸಿ.ಸಿ.ಎ), 1957ರ ನಿಯಮ 11ರ ಉಪಬಂಧಗಳಗನುಸಾರವಾಗಿ ಅನುಬಂಧ (i)ರಿಂದ (iv)ರವರೆಗೆ ದೋಷಾರೋಪಣಾ ಪಟ್ಟಿಯನ್ನು ಕಾರಣ ಕೇಳುವ ನೋಟೀಸ್‌ನೊಡನೆ ಜಾರಿ ಮಾಡಲಾಗಿತ್ತು ಹಾಗೂ ಅವರಿಗೆ ಲಿಖಿತ ಹೇಳಿಕೆಯನ್ನು ನೀಡಲು 15 ದಿನಗಳ ಕಾಲಾವಕಾಶವನ್ನು ನೀಡಲಾಗಿತ್ತು.

PS-1125 26/10/16

ಮೇಲೆ ಕ್ರಮಸಂಖ್ಯೆ (5)ರಲ್ಲಿ ಓದಲಾದ ದಿನಾಂಕ: 09.01.2016 ಮತ್ತು ದಿನಾಂಕ: 02.03.2016ರ ಲಿಖಿತ ಹೇಳಿಕೆಯಲ್ಲಿ ಕ್ರಮವಾಗಿ ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್ ಕುಮಾರ್.ಆರ್.ನವಣಿ., ಮೆಕ್ಯಾನಿಕ್ ಇವರುಗಳು ತಮ್ಮ ವಿರುದ್ಧ ಹೊರಿಸಲಾಗಿದ್ದ ಎಲ್ಲಾ ಆರೋಪಗಳನ್ನು ನಿರಾಕರಿಸಿ, ಸದರಿ ಆರೋಪಗಳು ಸತ್ಯಕ್ಕೆ ದೂರವಾಗಿರುವುದರಿಂದ ತಮ್ಮನ್ನು ಸದರಿ ಆರೋಪಗಳಿಂದ ಮುಕ್ತಗೊಳಿಸುವಂತೆ ಕೋರಿದ್ದು, ಅದರಂತೆ ಸದರಿಯವರುಗಳ ಲಿಖಿತ ಉತ್ತರಗಳನ್ನು ಪರಿಶೀಲಿಸಿ, ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ತಾಂತ್ರಿಕ ಶಿಕ್ಷಣ ನಿರ್ದೇಶಕರನ್ನು ಕೋರಲಾಗಿತ್ತು.

ಮೇಲೆ ಕ್ರಮಸಂಖ್ಯೆ (6)ರಲ್ಲಿ ಓದಲಾದ ಪತ್ರದಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಶ್ರೀ.ಎಸ್.ಬಿ. ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್‌ಕುಮಾರ್.ಆರ್.ನವಣಿ., ಮೆಕ್ಯಾನಿಕ್ ಇವರುಗಳು ತಮ್ಮ ವಿರುದ್ಧ ಹೊರಿಸಲಾಗಿರುವ ಎಲ್ಲಾ ಆರೋಪಗಳಿಗೆ ಪೂರಕ ದಾಖಲೆಗಳೊಂದಿಗೆ ಸಮಂಜಸ ಉತ್ತರವನ್ನು ನೀಡಿರುವುದಿಲ್ಲ ಹಾಗೂ ನೀಡಿರುವ ಉತ್ತರವು ಸಹ ಸಮರ್ಪಕವಾಗಿಲ್ಲವಾದ್ದರಿಂದ ಸದರಿಯವರುಗಳ ವಿರುದ್ಧ ಸರ್ಕಾರದ ಹಂತದಲ್ಲಿ ಜಂಟಿ ಇಲಾಖಾ ವಿಚಾರಣೆಯನ್ನು ನಡೆಸುವುದು ಸೂಕ್ತವೆಂದು ಅಭಿಪ್ರಾಯ ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್‌ಕುಮಾರ್.ಆರ್.ನವಣಿ., ಮೆಕ್ಯಾನಿಕ್, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ-ಇವರುಗಳ ವಿರುದ್ಧದ ಆರೋಪಗಳ ಸತ್ಯಾಸತ್ಯತೆಗಳನ್ನು ತಿಳಿಯಲು ಪೂರ್ಣ ಪ್ರಮಾಣದ ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸಲು ಸರ್ಕಾರವು ನಿರ್ಣಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರಿ ಆದೇಶ ಸಂಖ್ಯೆ:ಇಡಿ 126 ಡಿಟಿಇ 2014,</u>**

**<u>ಬೆಂಗಳೂರು, ದಿನಾಂಕ: 24ನೇ ಅಕ್ಟೋಬರ್ 2016.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ.ಎಸ್.ಬಿ.ಮುಜಗೊಂಡ., ಪ್ರಾಂಶುಪಾಲರು ಮತ್ತು ಶ್ರೀ.ಅರುಣ್‌ಕುಮಾರ್.ಆರ್.ನವಣಿ., ಮೆಕ್ಯಾನಿಕ್, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ-ಇವರುಗಳ ವಿರುದ್ಧ ಮಾಡಲಾಗಿರುವ ದೋಷಾರೋಪಣೆಗಳಿಗೆ ಸಂಬಂಧಿಸಿದಂತೆ ಅವರೀರ್ವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಗಳು, 1957ರ ನಿಯಮ 11ರ ಉಪಬಂಧಗಳಿಗನುಸಾರವಾಗಿ (2) ಮತ್ತು (5)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಜಂಟಿ ಇಲಾಖಾ ವಿಚಾರಣೆಯನ್ನು ನಡೆಸಲು **"ಶ್ರೀ.ಎಸ್.ವೈ.ಕುಂಬಾರ್., ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, # 394, 18ನೇ ಮೇನ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095 (ಮೊಬೈಲ್ ಸಂಖ್ಯೆ: 9900245450)"**-ಇವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಇದೇ ನಿಯಮದ ನಿಯಮ 11(5)(ಸಿ) ಅಡಿಯಲ್ಲಿ ಶ್ರೀ.ಜಿ.ಶ್ರೀಕಾಂತ್., ಉಪ ನಿರ್ದೇಶಕರು (ತನಿಖೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9448820473)-ಇವರನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಮಂಡನಾಧಿಕಾರಿಗಳನ್ನಾಗಿ ನೇಮಕ ಮಾಡಲಾಗಿದೆ.

ವಿಚಾರಣಾಧಿಕಾರಿಗಳು ಕರ್ನಾಟಕ ನಾಗರೀಕ ಸೇವಾ (ಸಿ.ಸಿ.ಎ) ನಿಯಮಗಳು, 1957ರ ನಿಯಮ 11 ರಡಿಯಲ್ಲಿ ತಿಳಿಸಲಾಗಿರುವ ಕಾರ್ಯವಿಧಾನವನ್ನು ಅನುಸರಿಸಿ ಇಲಾಖಾ ವಿಚಾರಣೆಯನ್ನು 03 ತಿಂಗಳ ಒಳಗಾಗಿ ಪೂರ್ಣಗೊಳಿಸಿ ವರದಿ ನೀಡುವಂತೆ ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

S Venkatesh

(ಎಸ್.ವೆಂಕಟೇಶ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ).
24/10/2016

<u>ಗೆ:</u>

1. ಶ್ರೀ.ಎಸ್.ವೈ.ಕುಂಬಾರ್., ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, # 394, 18ನೇ ಮೇನ್, 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095 (ಮೊಬೈಲ್ ಸಂಖ್ಯೆ: 9900245450)-(ಆಪಾದಿತರಿಗೆ ಜಾರಿ ಮಾಡಲಾದ ಆರೋಪಣಾ ಪಟ್ಟಿ ಹಾಗೂ ದಾಖಲಾತಿಗಳೊಂದಿಗೆ ಕಳುಹಿಸಿದೆ) (R.P.A.D.) (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ).

2. ಶ್ರೀ.ಜಿ.ಶ್ರೀಕಾಂತ್., ಉಪ ನಿರ್ದೇಶಕರು (ತನಿಖೆ), ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಅರಮನೆ ರಸ್ತೆ, ಬೆಂಗಳೂರು (ಮೊಬೈಲ್ ಸಂಖ್ಯೆ: 9448820473) (ಆಪಾದಿತರಿಗೆ ಜಾರಿ ಮಾಡಲಾದ ಆರೋಪಣಾ ಪಟ್ಟಿ ಹಾಗೂ ದಾಖಲಾತಿಗಳೊಂದಿಗೆ ಕಳುಹಿಸಿದೆ).

ಪ್ರತಿ:

1. ಮಹಾಲೇಖಪಾಲರು (ಎ&ಇ, ಲೆಕ್ಕಪರಿಶೋಧನೆ-1, ಲೆಕ್ಕಪರಿಶೋಧನೆ-2), ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಮುಖ್ಯ ಆಡಳಿತಾಧಿಕಾರಿ, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಪ್ರಾಂಶುಪಾಲರು, ಸರ್ಕಾರಿ ಪಾಲಿಟೆಕ್ನಿಕ್, ವಿಜಯಪುರ.
5. ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿಯವರಿಗೆ (ತಾಂತ್ರಿಕ ಶಿಕ್ಷಣ ನಿರ್ದೇಶಕರ ಮುಖಾಂತರ).
6. ಶಾಖಾ ರಕ್ಷಾ ಕಡತ / ಓಡಿಜಿಸಿ / ಹೆಚ್ಚಿನ ಪ್ರತಿಗಳು.